ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕಃ 11-11-2019.

ಪಾಟೀ ಸವಾಲುಃ ಶ್ರೀ ಜಿ.ಆರ್.ಜಿ., ವಾದಿ ಪರ ವಕೀಲರಿಂದ :

ವಾದಿಯ ಸದರಿ ದಾವೆಯನ್ನು ಆಸ್ತಿಯ ವಿಚಾರವಾಗಿ ಹೂಡಿರುತ್ತಾರೆ. ಸರ್ವೆನಂಬರ್ 153 ರಲ್ಲಿ 21 ಗುಂಟೆ, ಮತ್ತು ಸ.ನಂ. 157/5 ರಲ್ಲಿ 7 ಗುಂಟೆ ಆಸ್ತಿಗಾಗಿ ಈ ದಾವೆಯನ್ನು ಹೂಡಿರುತ್ತಾರೆ. ಸ.ನಂ. 153 ಮತ್ತು ಸ.ನಂ. 157/5 ರಲ್ಲಿ ಒಟ್ಟು ಎಷ್ಟು ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆನಂಬರ್ ಆಸ್ತಿಗಳು ಮೂಲತಃ ಶಾಂತಮ್ಮ ರವರಿಗೆ ಸೇರಿರುತ್ತದೆ. ಸದರಿ ಶಾಂತಮ್ಮನವರಿಗೆ ಸರ್ವೆನಂಬರ್ ಆಸ್ತಿಗಳು ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರಿಕೆಯನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಪ್ರಮಾಣಪತ್ರಿಕೆಯಲ್ಲಿ ಶಾಂತಮ್ಮನವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂದು ಬರೆಸಿರುವುದಿಲ್ಲ.

1 ನೇ ಪ್ರತಿವಾದಿಯ ಗಂಡನ ಹೆಸರು ಶಿವರಾಮಚಾರ್. ಶಿವರಾಮಚಾರ್ ರವರಿಗೆ ಇಬ್ಬರು ಸಹೋದರರು. ಅವರ ಹೆಸರುಗಳು ನನಗೆ ನೆನಪಿಲ್ಲ. ಸದರಿ ಶಿವರಾಮಚಾರ್ ರವರು ಎಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವರಾಮ ಮತ್ತು ಅವರ ಸಹೋದರರ ನಡುವೆ ಯಾವ ಸ್ವತ್ತುಗಳನ್ನು ಹಾಗೂ ಎಷ್ಟೆಷ್ಟು ಸ್ವತ್ತುಗಳನ್ನು ಮತ್ತು ಯಾರು ಯಾರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನೆನಪಿರುವುದಿಲ್ಲ. ರಾಜಗೋಪಾಲಚಾರಿ ಮತ್ತು ರಾಮಕೃಷ್ಣಚಾರಿ ಸದರಿ ಶಿವರಾಮು ರವರ ಸಹೋದರರು ಎಂದರೆ ಸರಿ. ಸದರಿ ಶಿವರಾಮು ರವರ ತಂದೆಯ ಹೆಸರು ಗೊತ್ತಿಲ್ಲ. ಅವರ ತಂದೆಯ ಹೆಸರು ಚಿಕ್ಕಚಾರಿ ಎಂದರೆ ಸರಿ. ಸದರಿ ಚಿಕ್ಕಚಾರಿ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಸದರಿ ರಾಜಗೋಪಾಲಚಾರಿ ಮತ್ತು ರಾಮಕೃಷ್ಣಚಾರಿ ರವರು ಮೊದಲನೆ ಹೆಂಡತಿ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಶಿವರಾಮು ಎರಡನೇ ಹೆಂಡತಿ ಮಗ ಎಂದರೆ ನನಗೆ ಗೊತ್ತಿಲ್ಲ.

ಸರ್ವೆನಂಬರ್ 153 ರಲ್ಲಿ ಒಟ್ಟು 37 ಗುಂಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 37 ಗುಂಟೆಯಲ್ಲಿ ರಾಜಗೋಪಾಲಚಾರಿ ಮತ್ತು ರಾಮಕೃಷ್ಣಚಾರಿ ಮತ್ತು ಶಿವರಾಮು ರವರು ತಲಾ 12 . 1/4 ಗುಂಟೆಯಂತೆ ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆನಂಬರ್ 157/5 ಒಟ್ಟು 15 ಗುಂಟೆ ಜಮೀನು ಇದ್ದು, ಸದರಿಯವರು ತಲಾ 5 ಗುಂಟೆಯಂತೆ ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿಃ 12-04-1993 ರಂದು 2 ಮತ್ತು 3 ನೇ ಪ್ರತಿವಾದಿಯರ ತಂದೆ ರಾಜಗೋಪಾಲಚಾರಿರವರಿಂದ ವಾದಿಯು ದಾವಾಸ್ತಿಗಳನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ವಾದಿಯು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಮತ್ತು ನನ್ನ ನಡುವೆ ವಿಶ್ವಾಸವಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಗಳ ವಿಚಾರ ನನಗೆ ಗೊತ್ತಿಲದಿದ್ದರೂ ಸಹಿತ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿದ್ದರೂ ಸಹ 1 ನೇ ಪ್ರತಿವಾದಿಗೆ ಸಹಾಯ ಮಾಡುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

**3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**